ಅಸಲು ದಾವಾ ಸಂಖ್ಯೆ - 143/2016
ಪಿಡಬ್ಲ್ಯೂ - 01
ದಿನಾಂಕಃ 31.05.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ - ಶ್ರೀ ಪಿ ಆರ್ ಕೆ ವಕೀಲರಿಂದ.**

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ನಾನು ಪ್ರಸನ್ನ ಇತನ ಜನನ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ. ಈ ಹಂತದಲ್ಲಿ ಎನ್ ಎಸ್ ಪಿ ವಕೀಲರು ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ಗುರುತಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆದರೆ ಸದರಿ ದಾಖಲೆ ಸಾರ್ವಜನಿಕ ದಾಖಲೆ ಮತ್ತು ಮೂಲ ದಾಖಲೆಯಾಗಿರುವುದರಿಂದ ತಕರಾರನ್ನು ತಿರಸ್ಕರಿಸಿ ಸದರಿ ದಾಖಲೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 13 ರ ಪರ ಎಂ ಎನ್ ಆರ್ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ.14 ರವರ ಪರ ಎನ್ ಎಸ್ ಪಿ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು